ಶ್ರೀ ಸಿ. ಎಂ. ಉದಾಸಿ : ಈ ಸೇತುವೆ ಬಗ್ಗೆ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುವ ಕೆಲಸವನ್ನು ಮಾನ್ಯ ಹಿರಿಯ ಸದಸ್ಯರ ಸಲಹೆಗಳನ್ನು ಗಮನಿಸುತ್ತೇನೆ.

ಬೆಂಗಳೂರು ನಗರದಲ್ಲಿ ಮೇಲು ಸೇತುವೆ ನಿರ್ಮಾಣ.

244 (2081)-ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯಲ್ಲಿ ಕಡಿಮೆ ಮಾಡುವ ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು?

ಇ) ಈಗಾಗಲೇ ಕೈಗೆತ್ತಿಕೊಂಡಿರುವ ಮಾಲು ಸೇತುವೆಗಳ ನಿರ್ಮಾಣ ವಿವರಗಳನ್ನು ನೀಡುವುದು?

ಈ) ಪ್ರತಿಯೊಂದು ಮೇಲು ಸೇತುವೆ ನಿರ್ಮಾಣ ಮಾಡಲು ಅಗತ್ಯವಾಗುವ ಹಣ?

ಉ) ಯಾವ ಯಾವ ಮೇಲು ಸೇತುವೆಗಳು 1997ರ ಕೊನೆಯ ಹೊತ್ತಿಗೆ ನಿರ್ಮಾಣವಾಗಲಿದೆ?

ಶ್ರೀ ಅನಂತ್‌ನಾಗ್(ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು

ಆ) ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮೇಲು ಸೇತುವೆಗಳು ವಿವರಗಳು ಈ ಕೆಳಕಂಡಂತಿವೆ:

1) ಟೌನ್‌ಹಾಲ್‌ನಿಂದ ಸಿರ್ಸಿ ವೃತ್ತದವರೆಗೆ ಮೇಲು ಸೇತುವೆ ನಿರ್ಮಾಣ

2) ಹಡ್ಸನ್ ವೃತ್ತದಿಂದ ಟೌನ್‌ಹಾಲ್‌ವರೆಗೆ ಸಬ್‌ವೇ ಸಹಿತ ಮೇಲು ಸೇತುವೆ ನಿರ್ಮಾಣ

3) ರಿಚ್‌ಮಂಡ್ ವೃತ್ತದಲ್ಲಿ ಗ್ರೇಡ್ ಸಪರೇಶನ್ ಹಾಗೂ ಮೇಲುಸೇತುವೆ ನಿರ್ಮಾಣ

4) ಮಹಾರಾಣಿ ಕಾಲೇಜಿನಿಂದ ರಾಜಾಜಿನಗರ ಪ್ರದೇಶ ದ್ವಾರದವರೆಗೆ ಕಾರಿಡಾರ್ ಅಭಿವೃದ್ಧಿ

5) ಟ್ರಿನಿಟಿ ವೃತ್ತದಲ್ಲಿ ಮೇಲು ಸೇತುವೆ ನಿರ್ಮಾಣ

6) ಸುಭಾಷ್‌ನಗರದಿಂದ (ಶಾಂತಲಾ ಸಿಲ್ಕ್ ಅಂಡ್ ಸ್ಯಾರಿಸ್) ಮಾಗಡಿ ರಸ್ತೆಯ ಮುಖಾಂತರ ಪಶ್ಚಿಮ ಕಾರ್ಡ್‌ರಸ್ತೆ ಸೇತುವೆಯ ನಿರ್ಮಾಣ

7) ಮೇಕ್ರಿ ವೃತ್ತದಲ್ಲಿ ಮೇಲು ಸೇತುವೆ ನಿರ್ಮಾಣ

ಇ) ಈಗ ಸದ್ಯಕ್ಕೆ ಟೌನ್ ಹಾಲ್ ನಿಂದ ಸಿರ್ಸಿ ವೃತ್ತದವರೆಗೆ ಮೇಲು ಸೇತುವೆ ನಿರ್ಮಾಣವನ್ನು ಮೆ: ಎಲ್ ಅಂಡ್ ಟಿ ಸಂಸ್ಥೆಯ ಮುಖಾಂತರ ರೂ. 94.00 ಕೋಟಿ ಲಮ್‌ಸಮ್ ಮೊತ್ತಕ್ಕೆ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯು 4-7-96ರಂದು ಪ್ರಾರಂಭವಾಗಿದ್ದು 31-12-98ರೊಳಗೆ ಮುಗಿಯುವ ಸಾಧ್ಯತೆ ಇದೆ. ಈ ಕಾಮಗಾರಿಯನ್ನು ಮೆಗಾಸಿಟಿ ಯೋಜನೆ ಅಡಿಯಲ್ಲಿ ಕರ್ನಾಟಕ ನಗರ ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಹಾಗೂ ಹುಡ್ಕೊ ಸಂಸ್ಥೆಗಳ ಸಾಲದ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗಿದೆ.

ಈ) ರೂ. ಕೋಟಿಗಳಲ್ಲಿ

1)	ಟೌನ್‌ಹಾಲ್‌ನಿಂದ ಸಿರ್ಸಿ ವೃತ್ತದವರೆಗೆಮೇಲು ಸೇತುವೆ ನಿರ್ಮಾಣ	91.00
2)	ಹಡ್ಸನ್ ವೃತ್ತದಿಂದ ಟೌನ್‌ಹಾಲ್‌ವರೆಗೆ ಸಬ್‌ವೇ ಸಹಿತ ಮೇಲು ಸೇತುವೆ ನಿರ್ಮಾಣ	35.00
3)	ರಿಚ್‌ಮಂಡ್ ವೃತ್ತದಲ್ಲಿ ಗ್ರೇಡ್ ಸಪರೇಶನ್ ಹಾಗೂ ಮೇಲುಸೇತುವೆ ನಿರ್ಮಾಣ	40.93
4)	ಮಹಾರಾಣಿ ಕಾಲೇಜಿನಿಂದ ರಾಜಾಜಿನಗರ ಪ್ರದೇಶದ್ವಾರದವರೆಗೆ ಕಾರಿಡಾರ್ ಅಭಿವೃದ್ಧಿ	80.00
5)	ಟ್ರಿನಿಟಿ ವೃತ್ತದಲ್ಲಿ ಮೇಲುಸೇತುವೆ ನಿರ್ಮಾಣ	30.00
6)	ಸುಭಾಷ್‌ನಗರದಿಂದ (ಶಾಂತಲಾ ಸಿಲ್ಕ್ ಅಂಡ್ ಸ್ಯಾರಿಸ್) ಮಾಗಡಿರಸ್ತೆಯ ಮುಖಾಂತರ ಪಶ್ಚಿಮ ಕಾರ್ಡ್‌ರಸ್ತೆ ಸೇತುವೆಯ ನಿರ್ಮಾಣ	80.00
7)	ಮೇಕ್ರಿ ವೃತ್ತದಲ್ಲಿ ಮೇಲು ಸೇತುವೆ ನಿರ್ಮಾಣ	25.00

ಉ) ಯಾವುದೂ ಇಲ್ಲ.

ಅಧ್ಯಕ್ಷರು : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು ಬಂದಿಲ್ಲ, ಈಗ ಅವರ ಪ್ರಶ್ನೆ ಬಂದಿದೆ. ಸಂಸದೀಯ ವ್ಯವಹಾರಗಳ ಸಚಿವರೂ ಇಲ್ಲ. ಆದ್ದರಿಂದ ಮಾನ್ಯ ಪ್ರಕಾಶರವರೇ, ಇದರ ಸಂಬಂಧವಾಗಿ ಯಾರು ಉತ್ತರ ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಪ್ರಾರಂಭದಲ್ಲೇ ಈ ರೀತಿಯಾಗುತ್ತಿದೆ. ಪ್ರಶ್ನೋತ್ತರ ಅವಧಿಯಲ್ಲಿ ಮಂತ್ರಿಗಳು ಇರಬಾರದು ಎಂದು ಹೇಳಿದರೆ ಹೇಗೆ? ಅವರನ್ನೇನು ಆಹ್ವಾನ ಪತ್ರಿಕಾ ಕೊಟ್ಟು ಕರೆದುಕೊಂಡು ಬರಬೇಕೇ?

ಅಧ್ಯಕ್ಷರು : ನಿನ್ನೆ 11 ಗಂಟೆಗೆ ಎಂದು ಇಲ್ಲಿ ಪ್ರಕಟಣೆ ಮಾಡಿದ್ದೆವು. ಆದ್ದರಿಂದ ಸ್ವಲ್ಪ ಅನಾನುಕೂಲವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರಿಗೆ ಅನಾನುಕೂಲವಾಗಿದೆ ಎಂದರೆ ನಾವು ಒಪ್ಪುತ್ತೇವೆ. ಏಕೆಂದರೆ, ಅವರಿಗೆ ಹೇಳುವವರಿಲ್ಲ, ಅಥವಾ ಅಸಿಸ್ಟ್ ಮಾಡುವವರು ಇಲ್ಲ. ಆದರೆ, ಮಂತ್ರಿಗಳಿಗೆ ಅಸಿಸ್ಟ್ ಮಾಡುವವರು ಇರುತ್ತಾರೆ, ಸೆಕ್ರಟರಿಗಳು, ಪಿ.ಎ.ಗಳು ಎಲ್ಲರೂ ಇರುತ್ತಾರೆ. ಪ್ರಶ್ನೆಯನ್ನು ಬ್ರೀಪ್ ಮಾಡಿ ಆಗಿರುತ್ತದೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಅಭಿವೃದ್ಧಿಗೆ ಈಗಾಗಲೇ 3-4 ಕ್ರಮಗಳನ್ನು ಕೈಗೊಂಡಿದ್ದೇವೆ. ಒಂದು ಮೆಗಾಸಿಟಿ ಪ್ರಾಜೆಕ್ಟ್, ಇನ್ನೊಂದು ಬೆಂಗಳೂರು ಸಂಚಾರ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೋಸ್ಕರ ಮಲೇಷಿಯನ್ ಕಂಪನಿಯವರು ಈಗಾಗಲೇ ಸರ್ಕಾರದೊಡನೆ ಮೆಮೋರ್ಯಾಂಡ ಆಫ್ ಅಂಡರ್‌ಸ್ಟಾಂಡಿಂಗ್‌ಗೆ ಸಹಿ ಮಾಡಿದ್ದಾರೆ. 4 ವೃತ್ತಗಳಲ್ಲಿ ಫ್ಲೈ ಓವರ್ಸ್ ಕಟ್ಟುವುದು, ಮತ್ತು ಕೆಲವುಕಡೆ ಸಬ್ ವೇ ಗಳನ್ನು ಮಾಡುವುದು. ಇದು ಇವತ್ತು ನಮ್ಮ ಮುಂದಿರತಕ್ಕಂತಾದ್ದು. ಒಂದು ಫ್ಲೈ ಓವರ್‌ನ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದು ನಡೆಯುತ್ತಾ ಇದೆ. ಇನ್ನು ಮೂರು ಫ್ಲೈ ಓವರ್, ಮೇ20 ಸರ್ಕಲ್, ರಿಚ್‌ಮಂಡ್ ಸರ್ಕಲ್ ಈ ಎರಡು ಸರ್ಕಲ್‌ಗಳಿಗೆ ಫ್ಲೈ ಓವರ್ ಕಟ್ಟುವುದಕ್ಕೋಸ್ಕರ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಕೆಲಸ ಪ್ರಾರಂಭವಾಗುತ್ತದೆ. ಒಟ್ಟು ಸಂಚಾರ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೋಸ್ಕರ ಪ್ರಾಜೆಕ್ಟ್ ಮಾಡಿರುವುದು. ಕೆಲವು ಕಡೆ ಇಷ್ಟು ಕೆಯಾಟಿಕ್ ಇದೆ. ಈ ಟ್ರಾನ್ಸ್‌ಪೋರ್ಟೇಷನ್ ಈವನ್ ಟ್ರಾಫಿಕ್. ಈಗ ಅದನ್ನು ಸರಿಪಡಿಸುವುದಕ್ಕೆ ಒಂದು ಔಟರ್ ರಿಂಗ್ ರೋಡ್ ಎಂದು ಮಾಡಿದ್ದೇವೆ. ಅದಷ್ಟು ಲಾರಿಗಳು ಬೆಂಗಳೂರು ನಗರದೊಳಗೆ ಬರುವುದನ್ನು ತಪ್ಪಿಸಿಬಿಟ್ಟು, ಮದ್ರಾಸ್‌ಗೋ ಅಥವಾ ಬೇರೆ ಕಡೆಯೋ

ಹೋಗುವುದಕ್ಕೆ ಒಂದು ಔಟರ್ ರಿಂಗ್ ರೋಡ್. ಇನ್ನರ್ ರಿಂಗ್ ರೋಡ್ ಎಂದು ಇತ್ತು. ನಾನೇ ಸ್ವತಃ ಹೋಗಿ ನೋಡಿ ಆದಕ್ಕೆ 18 ಕಿಲೋಮೀಟರ್ ಕೂಡಿಸಬೇಕಾಗಿತ್ತು. ಆ ಕೆಲಸ ಮಾಡುತ್ತಾ ಇದ್ದೇವೆ. ಇದು ಆದರೆ, ನಗರದ ಟ್ರಾಫಿಕ್‌ನಲ್ಲಿ ಒತ್ತಡ ಕಡಿಮೆಯಾಗುತ್ತದೆ.

ಶ್ರೀ ಎನ್. ರಾಜಣ್ಣ : ನನಗೆ ಉತ್ತರ ಬಂದಿರುವುದು 7 ಕಡೆ ಫ್ಲೈ ಓವರ್ಸ್, ಸಬ್ ವೇ ಗಳನ್ನು ಮಾಡುತ್ತೇನೆಂದು ಹೇಳಿದ್ದಾರೆ. ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಂದು ಹೇಳಿಕೆ ಬಂದಿದೆ. `Panel set up to study the feasibility of Fly Over. This was stated by the High Court. An order was passed on the Writ Appeal filed by an Advocate Sri Amarnath. A panel consisting of Chirman of the Karnataka State Pollution Control Board, the Secretary, Department of Forest & Ecology.'

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ನಿಮ್ಮ ಸಮಸ್ಯೆ ಏನು ಎಂಬುದನ್ನು ಹೇಳಿ.

ಶ್ರೀ ಎನ್. ರಾಜಣ್ಣ ಇದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. Panel set up to study the feasibility of fly over ಏನಾದರೂ ತಡೆಯಾಗುತ್ತದೆಯೇ? ಈ ಪ್ರಶ್ನೆ ಕೇಳಿರುವುದು ಸಿಸಿ ವೃತ್ತದಿಂದ ಟೌನ್‌ಹಾಲ್‌ವರೆಗೆ ಫ್ಲೈ ಓವರ್ ನಡೆಯುತ್ತಿರತಕ್ಕ ಕೆಲಸಕ್ಕೆ ತಡೆಬರಬಹುದು ಎಂಬುದು ಮೊದಲನೆಯದು. ಎರಡನೆಯದು, ಇಲ್ಲಿ 7 ಫ್ಲೈ ಓವರ್ಸ್ ಮತ್ತು ಸಬ್ ವೇಸ್ ಮಾಡುತ್ತೇವೆಂದು ನನಗೆ ರಿಪ್ಲೈ ಬಂದಿದೆ. ಆದರೆ, ಒಂದು ಶುರು ಮಾಡಿ, ಒಂದೂವರೆ ವರ್ಷವಾಯಿತು. ಮೆಗಾಸಿಟಿ ಪ್ರಾಜೆಕ್ಟ್‌ನಿಂದ, ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಹುಡ್ಕೋದಿಂದ ಸಾಲ ತೆಗೆದುಕೊಂಡು ಫ್ಲೈ ಓವರ್ ಕಟ್ಟುತ್ತೇವೆಂದು ಹೇಳಿದ್ದಾರೆ. ಆದರೆ, ಇಲ್ಲಿ ಒಟ್ಟು ಬೇಕಾದ್ದು 384 ಕೋಟಿ, 7 ಫ್ಲೈ ಓವರ್‌ಗಳಿಗೆ ಬೇಕಾಗುತ್ತದೆ. whether we are in a position to provide this huge amount to completer this 7 fly overs.

ಈ 7 ಫ್ಲೈ ಓವರ್ ಕಟ್ಟುವುದಕ್ಕೆ 384 ಕೋಟಿಗಳನ್ನು ನಾವು ರೆಡಿ ಮಾಡಿ ಕೊಡುವುದಕ್ಕೆ ಆಗುತ್ತದೆಯೇ? ಒಂದು ದಿನಕ್ಕೆ ಬೆಂಗಳೂರು ನಗರದಲ್ಲಿ 500 ವಾಹನಗಳು ಸೇರ್ಪಡೆಯಾಗುತ್ತಿವೆ. ಒಂದು ತಿಂಗಳಿಗೆ ಸುಮಾರು 12 ಸಾವಿರ ವಾಹನಗಳು ಸೇರ್ಪಡೆಯಾಗುತ್ತವೆ. ಉದಾಹರಣೆಗೆ, ಇವರು 7 ಕಡೆ ಫ್ಲೈ ಓವರ್ಸ್ ಕಟ್ಟುತ್ತಿದ್ದಾರಲ್ಲಾ

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಇದು ಪ್ರಶ್ನೋತ್ತರ ವೇಳೆ

Sri N. Rajanna : ನೀವು ಹೋಗಬೇಕಾದರೆ ನೋಡುತ್ತೀರಿ,ಇದು ನಿಮಗೇ ಗೊತ್ತಿದೆ. Traffic density you know, for example, ಉದಾಹರಣೆಗೆ ಮೇಕ್ರಿ ಸರ್ಕಲ್‌ನಲ್ಲಿ ಸುಮಾರು 2 ಕಿಲೋಮೀಟರ್‌ವರೆಗೆ ಗಾಡಿಗಳು ನಿಂತಿರುತ್ತವೆ.

ಅಧ್ಯಕ್ಷರು : ಅದಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಬೆಂಗಳೂರಿನ ಸಂಚಾರಿ ವ್ಯವಸ್ಥೆಗೆ, ಸಾರಿಗೆ ವ್ಯವಸ್ಥೆಗೆ ಹೆಚ್ಚು ಗಮನ ಕೊಡುಬೇಕು. ಬೇಕಾದರೆ ತಾವು ಅನುಮತಿ ಕೊಟ್ಟರೆ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

Mr. Speaker : The problem is solved.

Sri N. Rajanna : I welcome the suggestion.

ಅಧ್ಯಕ್ಷರು : ಪ್ರಶ್ನೆ :245(2094)ಕ್ಕೆ ಸರ್ಕಾರದವರು ಸ್ವಲ್ಪ ಸಮಯ ಕೇಳಿದ್ದಾರೆ. ಏಕೆಂದರೆ, ಇನ್ನು ಇಡೀ ರಾಜ್ಯದಿಂದ ಮಾಹಿತಿ ತರಿಸಬೇಕಾಗಿರುತ್ತದೆ.

ಶ್ರೀ ಹೆಚ್. ಡಿ. ಬಸವರಾಜ್ : ನಾನು ಕೇಳಿರುವುದು 1994-95, 1995-96 ಮತ್ತು 1996-97 ಇದೆಲ್ಲಾ ಅವರ ಹತ್ತಿರ ಇದೆ. ಇದರಲ್ಲಿ ತರಿಸುವಂಥಾದ್ದು ಏನಿದೆ?

ಅಧ್ಯಕ್ಷರು : ಉತ್ತರ ತರಿಸಿಕೊಂಡಿದ್ದರೆ, ಸುಮ್ಮಸುಮ್ಮನೆ ಯಾರು ಸಮಯಾವಕಾಶ ಕೇಳುವುದಿಲ್ಲ. ಸ್ವಲ್ಪ ಮಾಹಿತಿ ಕಡಿಮೆ ಬಿದ್ದಿರುತ್ತದೆ. ತರಿಸಿಕೊಡುತ್ತಾರೆ. ಈ ಅಧಿವೇಶನ ಸುಮಾರು ಒಂದು ತಿಂಗಳು ಇರುತ್ತದೆ. ಆರ್ಜೆಂಟಾಗಿ ತರಿಸಿ ಮತ್ತೆ ನಿಮ್ಮ ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತೇನೆ. ಸ್ವಲ್ಪ ಸಹಕರಿಸಿ.

ಅಧ್ಯಕ್ಷರು : ಕಂದಾಯ ಇಲಾಖಾ ಮಂತ್ರಿಗಳಿಗೆ ವರ್ಗಾವಣೆಯಾಗಿರುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಕೂಡ ಬಂದಿಲ್ಲ, ಪ್ರಶ್ನೆ ಮಾತ್ರ ಟೇಬಲ್ ಆಗಿದೆ. ನಾನು ಕೇಳಿರತಕ್ಕ ಪ್ರಶ್ನೆ ಅಬಕಾರಿ ಇಲಾಖೆಗೆ ಸಂಬಂಧಿಸಿದೆ. ಇದು ಕಂದಾಯ ಇಲಾಖೆಗೆ ಬರುವುದಿಲ್ಲ. ನನ್ನ ಪ್ರಶ್ನೆ ಕರೆಕ್ಟ್ ಇದೆ. ಇದಕ್ಕೆ ಉತ್ತರವನ್ನು ಅಬಕಾರಿ ಇಲಾಖೆಯವರೇ ಕೊಡಬೇಕು, ಕಂದಾಯ ಇಲಾಖೆಯವರು ಕೊಡುವುದಕ್ಕೆ ಬರುವುದಿಲ್ಲ.